ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

## ಶಿರೂರ ಗ್ರಾಮ ಪಂಚಾಯಿತಿಯ ಬೇದವಟ್ಟಿ ಗ್ರಾಮದ

# ಬೂದು ನೀರು ನಿರ್ವಹಣೆಯ ಯಶೋಗಾಥೆ



ಜಲ ಜೀವಾಮೃತ, ಜೀವನಕ್ಕೆ ಆಧಾರ. ಮಾನವನ ಜೀವದುದ್ದಕ್ಕೂ ಪ್ರತಿಯೊಂದು ಚಟುವಟಿಕಗಳಿಗೂ ನೀರಿನ ಉಪಯೋಗ ಅತ್ಯಗತ್ಯ. ಜೀವಾಮೃತವಾಗಿರುವ ನೀರು, ಬಳಕೆಯಾದ ನಂತರ ಸಮರ್ಪಕವಾಗಿ ನಿರ್ವಹಿಸದೆ, ಎಲ್ಲಂದರಲ್ಲಿ ಹರಿಬಿಟ್ಟರೆ ಸಾಂಕ್ರಾಮಿಕ ರೋಗಗಳನ್ನು ಹುಟ್ಟುಹಾಕುತ್ತದೆ. ಇದರಿಂದ ಪಾರಾಗಲು ಬಳಸಿದ ನೀರನ್ನು ವೈಜಾನಿಕವಾಗಿ ನಿರ್ವಹಣೆ ಮಾಡಿ ಮರುಬಳಕೆಗೆ ಯೋಗ್ಯವಾಗುವಂತೆ ಮಾಡುವುದೇ ಬೂದು ನೀರು ನಿರ್ವಹಣೆ.

ಸ್ವಚ್ಛ ಹಾಗೂ ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಬೂದು ನೀರು ನಿರ್ವಹಣೆ ಪ್ರಮುಖ ಪಾತ್ರ ವಹಿಸಿದೆ. ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಶಿರೂರ ಗ್ರಾಮ ಪಂಚಾಯಿತಿಯ ಬೇದವಟ್ಟಿ ಗ್ರಾಮದಲ್ಲಿ ಬೂದು ನೀರು ನಿರ್ವಹಣೆ ಯೋಜನೆ ಅನುಷ್ಠಾನಗೊಂಡಿದ್ದು ಸ್ವಸ್ಥ ಸಮಾಜದ ನಿರ್ಮಾಣ ಹಾದಿಯಲ್ಲಿ ಮುಂದಡಿಯಿಟ್ಟಿದೆ.

ಬೇದವಟ್ಟಿ ಗ್ರಾಮದಲ್ಲಿ ಒಟ್ಟು 214 ಕುಟುಂಬಗಳಿದ್ದು, ಈ ಕುಟುಂಬಗಳಿಂದ ಪ್ರತಿ ದಿನ 41,233 ಲೀಟರ್ ಗಳಷ್ಟು ಬೂದು ನೀರು ಗ್ರಾಮದಿಂದ ಹೊರಬರುತ್ತಿದೆ. ಈ ಬೂದು ನೀರು ಸುಮಾರು 500 ಮೀಟರ್ ದೂರವಿರುವ ಹಿರೇಹಳ್ಳಕ್ಕೆ ಸೇರುತ್ತಿದ್ದು, ಹಳ್ಳದ ನೀರು ಕಲುಷಿತಗೊಳ್ಳುತ್ತಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆ, ಮಹಾತ್ಮಗಾಂಧಿ ನರೇಗಾ ಯೋಜನೆ ಹಾಗೂ 15ನೇ ಹಣಕಾಸು ಸಹಭಾಗಿತ್ವದಲ್ಲಿ ಬೂದು ನೀರನು ವೈಜಾನಿಕವಾಗಿ ನಿರ್ವಹಣೆ ಮಾಡಲಾಗಿದೆ.

## ಬೂದು ನೀರಿನ ವೈಜ್ಞಾನಿಕ ನಿರ್ವಹಣೆಗೆ ಅನುಸರಿಸಿದ ಕ್ರಮಗಳು

ಗ್ರಾಮವನ್ನು ಸಮೀಕ್ಷೆ ಮಾಡಲಾಗಿ ಮಾದರಿಯಾಗಿ ಒಂದು ಸ್ಥಳವನ್ನು ಗುರುತಿಸಿ ಗ್ರಾಮದಲ್ಲಿ ಉತ್ಪತ್ತಿಯಾಗುವ ಬೂದು ನೀರು ಹಿರೇಹಳ್ಳಕ್ಕೆ ಸೇರುವುದನ್ನು ತಪ್ಪಿಸಲು ಒಂದು ಸ್ಥಳದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗಿದೆ ಗ್ರಾಮದಲ್ಲಿ ಸುಮಾರು 214 ಮನೆಗಳಿಂದ, 900 ಜನಸಂಖ್ಯೆ ಹೊಂದಿರುವ ಪ್ರದೇಶದಿಂದ 34.20 KLD ಬೂದು ನೀರು ಉತ್ಪತ್ತಿಯಾಗುತ್ತಿದ್ದು, ಅದಕ್ಕೆ ಶೇ.50 ರಷ್ಟು ಅಂದರೆ ಸುಮಾರು 17.10 KLD ನಷ್ಟು ಬೂದು ನೀರನ್ನು ಇನ್ ಲೈನ್ ಟ್ರೀಟ್‌ಮೆಂಟ್ ನ ಮಾದರಿಯಲ್ಲಿ ಬರುವ Floating Trap, SiltTrap ಮತ್ತು Constructed Wetland, Planted Gravel Filter Media ಮೂಲಕ ಗ್ರಾಮದಲ್ಲಿ ಬೂದು ನೀರನ್ನು ಸಂಸ್ಕರಿಸಲು ಉದ್ದೇಶಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಸಂಸ್ಕರಿಸಿದ ನೀರನ್ನು ಹಿರೇಹಳ್ಳದ ಮೂಲಕ ತುಂಗಭದ್ರ ನೀರಿಗೆ ಸೇರುತ್ತದೆ.



ಜಲಮೂಲಗಳಲ್ಲಿ ದ್ರವತ್ಯಾಜ್ಯ ಮಿಶ್ರಿತಗೊಂಡಾಗ ಶುದ್ಧನೀರು ಕಲುಷಿತಗೊಳ್ಳುತ್ತದೆ. ಗ್ರಾಮದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯತೆಯನ್ನು ಕಾಪಾಡಲು ಮನೆಯ ಹಂತದಲ್ಲಿ ಇಂಗು ಗುಂಡಿ, ಲೀಚ್ ಪಿಟ್, ಕಿಚನ್ ಗಾರ್ಡನ್, ಮ್ಯಾಜಿಕ್ ಪಿಟ್ ಗಳ ನಿರ್ಮಾಣ ಹಾಗೂ ಸಮುದಾಯ ಹಂತದಲ್ಲಿ ವೆಟ್ ಲ್ಯಾಂಡ್ಸ್, ಡಕ್ ವೀಡ್ ಪಾಂಡ್ ಸಿಸ್ಟಮ್, ನೀರಿನ ಸಂಸ್ಕರಣಾ ಹೊಂಡ ಸೇರಿದಂತೆ ಪ್ರಮುಖ ವೈಜಾನಿಕ ವಿಧಾನಗಳನ್ನು ಅನುಸರಿಸುವುದು ಅತ್ಯಗತ್ಯ ಎಂಬುದನ್ನು ಜನರಿಗೆ ಮನವರಿಕೆ ಮಾಡಲಾಗಿದೆ.

ಇದರಲ್ಲಿ ಬೇದವಟ್ಟಿ ಗ್ರಾಮ ಬೂದು ನೀರನ್ನು ವೈಜಾನಿಕವಾಗಿ ನಿರ್ವಹಣೆ ಮಾಡುವ ಮೂಲಕ ಶುದ್ಧೀಕರಿಸಿದ ನೀರನ್ನು ರೈತರ ಬೇಸಾಯಕ್ಕೆ, ಕೈತೋಟಕ್ಕೆ ಬಳಕೆಯಾಗುವಂತೆ ಮಾಡುವಲ್ಲಿ ಯಶಸ್ಸು ಕಂಡಿದೆ.

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ SWACHHA MEVA JAYATE | ಜಲೋತ್ಸವ ಮನೆ ಮನೆಗೆ ಗಂಗೆ | ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್

ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ: **9480985555**